ಗ್ರಾನೈಟ್ ಗಣಿಗಾರಿಕೆ ಕುರಿತು ಲೋಕಾಯುಕ್ತರು ದಾಖಲಿಸಿಕೊಂಡ ಪ್ರಕರಣಗಳು

1136 (402); ಡಾ॥ ಮಾಲಕರೆಡ್ಡಿ (ಯಾದಗಿರಿ)

ಅ) ರಾಜ್ಯದಲ್ಲಿನ ಗ್ರಾನೈಟ್ ಅಕ್ರಮ ಕಲ್ಲುಗಣಿಗಾರಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಪೋಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಲೋಕಾಯುಕ್ತ ಪೋಲೀಸರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ನಂತರ ಸಮಗ್ರ ತನಿಖೆ ಕೈಗೊಂಡು ಆರೋಪ ಪಟ್ಟಿಯನ್ನು ಸಲ್ಲಿಸಿರುವರೆ; ಹಾಗಿದ್ದಲ್ಲಿ, ತನಿಖೆಯು ಯಾವ ಹಂತದಲ್ಲಿದೆ;

ಇ) ಒಂದು ವೇಳೆ ಈ ಪ್ರಕರಣ ವಿಶೇಷ ತನಿಖಾ (ಎಸ್.ಐ.ಟಿ) ದಳಕ್ಕೆ ವರ್ಗಾವಣೆಯಾಗಿದ್ದರೆ ಅದರ ತನಿಖಾ ವ್ಯಾಪ್ತಿಯ ವಿವರಗಳೇನು; (ವಿಶೇಷ ತನಿಖಾ ದಳಕ್ಕೆ ವರ್ಗಾವಣೆಯಾಗಿರುವ ವಿವರದ ಪ್ರತಿ ಹಾಗೂ ತನಿಖೆಯ ಹಂತದ ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಯವರು)

ಅ) ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಇಳಕಲ್ ಗ್ರಾಮದ ಸುತ್ತಮುತ್ತಲಿನ ಪ್ರದೇಶದ ಅನಧಿಕೃತ ಗಣಿಗಾರಿಕೆಗೆ ಸಂಬಂಧಿಸಿದಂತೆ ಗುನ್ನೆ ಸಂಖ್ಯೆ: 04/2014, ದಿನಾಂಕ: 31–05–2014 ಹಾಗೂ ಕೊಪ್ಪಳ ಜಿಲ್ಲೆಯ ಯಲಬುರ್ಗ ತಾಲ್ಲೂಕಿನ ಕುಕ್ಕನೂರು ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ದಾಳಿ ಮಾಡಿ ಗುನ್ನೆ ಸಂಖ್ಯೆ:04/2014, ದಿನಾಂಕ: 24–06–2014ನ್ನು ಮಾನ್ಯ ಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ದಾಖಲಿಸಿಕೊಂಡಿರುವ ಗುನ್ನೆಯ ತನಿಖೆಯು ಪ್ರಗತಿಯಲ್ಲಿರುತ್ತದೆ.

ಇ) ಉಪ ನಿರ್ದೇಶಕರು, ಬಾಗಲಕೋಟೆ ಇವರು ಬಾಗಲಕೋಟೆ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದಂತೆ ಅಕ್ರಮ ಗಣಿಗಾರಿಕೆ ಕುರಿತಾಗಿ ದಾಖಲಾಗಿದ್ದ ಗುನ್ನೆ ಸಂಖ್ಯೆ–04/2014, ದಿನಾಂಕ: 31–05–2014, ಗುನ್ನೆಯು ರಾಜ್ಯ ಎಸ್.ಐ.ಟಿ.ಗೆ ವರ್ಗಾವಣೆಯಾಗಿದ್ದು, ಮೊಕದ್ದಮೆ ಸಂಖ್ಯೆ:35/2014 ಆಗಿದ್ದು, ತನಿಖೆಯು ಪ್ರಗತಿಯಲ್ಲಿದೆ.

ಹಿರಿಯ ಭೂವಿಜ್ಞಾನಿ, ಕೊಪ್ಪಳ ಇವರು ಕೊಪ್ಪಳ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದಂತೆ ಅಕ್ರಮ ಗಣಿಗಾರಿಕೆ ಕುರಿತಾಗಿ ದಾಖಲಾಗಿದ್ದ ಗುನ್ನೆ ಸಂಖ್ಯೆ–04/2014, ದಿನಾಂಕ: 24–06–2014 ಸದರಿ ಗುನ್ನೆಯು ರಾಜ್ಯ ಎಸ್.ಐ.ಟಿ.ಗೆ ವರ್ಗಾವಣೆಯಾಗಿದ್ದು, ಮೊಕದ್ದಮೆ ಸಂಖ್ಯೆ:32/2014 ಆಗಿದ್ದು, ತನಿಖೆಯು ಪ್ರಗತಿಯಲ್ಲಿದೆ.

ಕಸ ವಿಲೇವಾರಿ ಮಾಡಲು ತೆಗೆದುಕೊಂಡಿರುವ ಕ್ರಮ

1137 (1895); ಡಾ॥ ಅಶ್ವತ್ಥನಾರಾಯಣ ಸಿ.ಎನ್.

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿರುತ್ತದೆ; ಈ ಕಸ ವಿಲೇವಾರಿಯನ್ನು ಕಾನೂನು ಚೌಕಟ್ಟಿಗೆ ತರಲಾಗಿದೆಯೇ (ಸಮಗ್ರ ವಿವರ ನೀಡುವುದು);

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿದಿನ ಕಸ ಉತ್ಪತ್ತಿಯಾಗುತ್ತಿದೆ; ಹಸಿ ಮತ್ತು ಒಣಕಸ ಬೇರ್ಪಡಿಸಿದ ಪ್ರತಿಯೊಂದರ ಉತ್ಪನ್ನ ಎಷ್ಟು (ಸಂಪೂರ್ಣ ವಿವರ ನೀಡುವುದು);

ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯವನ್ನು ಯಾವ ರೀತಿ ನಿರ್ವಹಿಸಲಾಗುತ್ತಿದೆ.

ಈ) ಕಾಂಪೋಸ್ಟ್ ಅಥವಾ ಬಯೋ ಮಿಥನೈಜೇಷನ್ ಅಥವಾ ಲ್ಯಾಂಡ್ ಫಿಲ್ಲೀಂಗ್ ಅಥವಾ ತ್ಯಾಜ್ಯದಿಂದ ಇಂಧನ ಉತ್ಪಾದನ ವಿಧಾನವನ್ನು ಅನುಸರಿಸಲಾಗುತ್ತಿದೆಯೇ;